ಕರ್ನಾಟಕ ವಿಧಾನ ಸಭೆ

373 ಶ್ರೀ. ವಿಶ್ವನಾಥ್ ಚಂದ್ರಶೇಖರ್ ಮಾಮನಿ (ಸವದತ್ತಿಯಲ್ಲಮ್ಮ)

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

ಅ) ಬೆಳಗಾವಿ ಜಿಲ್ಲೆ, ಸವದತ್ತಿ ತಾಲ್ಲೂಕಿನ ಸಾರ್ವಜನಿಕ ಆಸ್ಪತ್ರೆಯು 100 ಹಾಸಿಗೆಯುಳ್ಳ ಆಸ್ಪತ್ರೆಯಾಗಿದ್ದು, ಈ ಆಸ್ಪತ್ರೆಯಲ್ಲಿರುವ ವೈದ್ಯಾಧಿಕಾರಿಗಳು ಮತ್ತು ಸಿಬ್ಬಂದಿಗಳ ಸಂಖ್ಯೆ ಎಷ್ಟು?

ಬೆಳಗಾವಿ ಜಿಲ್ಲೆ, ಸವದತ್ತಿ ತಾಲ್ಲೂಕಿನ ಸಾರ್ವಜನಿಕ ಆಸ್ಪತ್ರೆಯ ವೈದ್ಯಾಧಿಕಾರಿ ಮತ್ತು ಇತರೆ ಸಿಬ್ಬಂದಿಗಳ ಸಂಖ್ಯೆ ಈ ಕೆಳಕಂಡಂತೆ ಇದೆ.

ಹುದ್ದೆ	ಮಂಜೂರು	ಕಾರ್ಯನಿರತ	ಖಾಲಿ
ತಜ್ಞ ವೈದ್ಯರು	16	3	13
ಪತ್ರಾಂಕಿತ ಸಹಾಯಕರು	1	0	1
ದಂತ ವೈದ್ಯರು	2	2	0
ಕಚೇರಿ ಅಧೀಕ್ಷಕರು	1	1	0
ಪ್ರ.ದ.ಪ	4	2	2
ದ್ವಿ.ದ.ಪ	7	7	0
ಶುಶ್ರೂಷಕಿಯರು	12	6	6
ಹಿರಿಯ ಶುಶ್ರೂಷಕಿಯರು	1	0	1
ಶುಶ್ರೂಷಕ ಅಧೀಕ್ಷಕರು ದರ್ಜೆ–2	1	0	1
ಕಿರಿಯ ಪ್ರಯೋಗ ಶಾಲಾ ತಂತ್ರಜ್ಞರು	1	0	1
ಹಿರಿಯ ಪ್ರಯೋಗ ಶಾಲಾ ತಂತ್ರಜ್ಞರು	1	1	0
ಕ್ಷ–ಕಿರಣ ತಂತ್ರಜ್ಞರು	2	1	1
ಕಿರಿಯ ಫಾರ್ಮಸಿಸ್ಟ	2	1	1
ಹಿರಿಯ ಫಾರ್ಮಸಿಸ್ಟ	1	1	0
ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರು	2	0	2
ಇ.ಸಿ.ಜಿ ತಂತ್ರಜ್ಞರು	1	0	1
ವಾಹನ ಚಾಲಕರು	2	2	0
ಪ್ರಯೋಗ ಶಾಲಾ ಸಹಾಯಕರು	1	0	1
ಕ್ಷ–ಕಿರಣ ಸಹಾಯಕರು	1	0	1
ಡ ದರ್ಜೆ	40	16	24

ಒಟ್ಟು	100	44	56

ಆ) ಈ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಬಂದಿದೆ.

ಇ) ಹಾಗಿದ್ದಲ್ಲಿ, ಸಾರ್ವಜನಿಕರ ಅನುಕೂಲಕ್ಕಾಗಿ ವೈದ್ಯಾಧಿಕಾರಿಗಳು ಹಾಗೂ ಸಿಬ್ಬಂದಿಗಳನ್ನು ನೇಮಕ ಮಾಡಲು ಕ್ರಮ ಕೈಗೊಳ್ಳಲಾಗುವುದೇ?

ಖಾಲಿ ಇರುವ ತಜ್ಞ ವೈದ್ಯರ ಹುದ್ದೆಗಳನ್ನು ತಾತ್ಕಾಲಿಕವಾಗಿ ನಿವೃತ್ತ ತಜ್ಞ ವೈದ್ಯರುಗಳನ್ನು ಸಂದರ್ಶಕ ತಜ್ಞ ವೈದ್ಯರುಗಳನ್ನಾಗಿ ನೇಮಿಸಿಕೊಳ್ಳಲು ಜಿಲ್ಲಾ ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಲಾಗಿದೆ. ಇಲಾಖೆಯಲ್ಲಿ ಸೇವಾನಿರತ ವೈದ್ಯರುಗಳು ಸ್ನಾತಕೋತ್ತರ ಪದವಿ ಪಡೆದು ಬಂದ ನಂತರ ತಜ್ಞ ವೈದ್ಯರುಗಳನ್ನು ಆದ್ಯತೆ ಮೇರೆಗೆ ಭರ್ತಿ ಮಾಡಲು ಸಹ ಕ್ರಮ ಕೈಗೊಳ್ಳಲಾಗುವುದು.

ಆರೋಗ್ಯ ಇಲಾಖೆಯಲ್ಲಿ ಖಾಲಿ ಇರುವ 5021 ಅರೆವೈದ್ಯಕೀಯ ಹುದ್ದೆಗಳನ್ನು ವಿಶೇಷ ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಲು, ನೇಮಕಾತಿ ನಿಯಮಗಳ ಕರಡು ಅಧಿಸೂಚನೆಯನ್ನು ಆಕ್ಷೇಪಣೆ/ಸಲಹೆ ಸಲ್ಲಿಸಲು 15 ದಿನಗಳ ಕಾಲಾವಕಾಶ ನೀಡಿ ದಿನಾಂಕ: 7-2-2009 ರಂದು ಹೊರಡಿಸಲಾಗಿದೆ. ಸದರಿ ನಿಯಮಗಳು ಅಂತಿಮಗೊಂಡ ನಂತರ ನೇಮಕಾತಿ ಪ್ರಕ್ರಿಯೆ ಪ್ರಾರಂಭಗೊಳ್ಳುತ್ತದೆ. ಅಭ್ಯರ್ಥಿಗಳು ಲಭ್ಯವಾದ ನಂತರ ಖಾಲಿ ಹುದ್ದೆಗಳನ್ನು ಆದ್ಯತೆ ಮೇಲೆ ಭರ್ತಿ ಮಾಡಲಾಗುವುದು.

ಈ) ಒಂದೇ ತಜ್ಞತೆಯನ್ನು ಹೊಂದಿದ ವೈದ್ಯಾಧಿಕಾರಿಗಳು ಒಂದೇ ಸ್ಥಳದಲ್ಲಿ ಕೆಲಸ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಬಂದಿದೆ.

ಉ) ಹಾಗಿದ್ದಲ್ಲಿ, ಈ ಬಗ್ಗೆ ಕೈಗೊಂಡಿರುವ ಕ್ರಮವೇನು?

ಮಿಸ್‌ಮ್ಯಾಚ್ ಕಂಡುಬಂದ ಸಂದರ್ಭಗಳಲ್ಲಿ ತಜ್ಞತೆಗನುಸಾರ ಸ್ಥಳನಿಯುಕ್ತಿ ಮಾಡಲು ಕ್ರಮ ಕೈಗೊಳ್ಳಲಾಗಿದೆ. ಆದಾಗ್ಯೂ ಸಾರ್ವತ್ರಿಕ ವರ್ಗಾವಣೆ ಸಂದರ್ಭದಲ್ಲಿ ಸಹ ಈ ಬಗ್ಗೆ ಸರಿಪಡಿಸಲು ಕ್ರಮ ವಹಿಸಲಾಗುವುದು.

ಸಂಖ್ಯೆ: ಆಕುಕ 15 ಹೆಚ್‌ಎಸ್‌ಡಿ 2009

(ಬಿ.ಶ್ರೀರಾಮುಲು)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.